# ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

ಶ್ರೀಮತಿ ಮಂಜುಳ -ವಿರುದ್ಧ ಕೆನರಾ ಬ್ಯಾಂಕ್ ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 56785/2015 (ಜಿಎಂ-ಡಿಆರ್ಟಿ), ದಿನಾಂಕ 28 ನೇ ಜೂನ್, 2019

ಆಜ್ಞೆ

ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ:

ಅನುಬಂಧ- ಎ ಪ್ರಕಾರ ಬೆಂಗಳೂರಿನ ಸಾಲ ವಸೂಲಿ ನ್ಯಾಯಾಧಿಕರಣದ (ಸಂಕ್ಷಿಪ್ತವಾಗಿ ' ಡಿಆರ್ಟಿ) ಪ್ರಿಸೈಡಿಂಗ್ ಅಧಿಕಾರಿಯವರ ಕಡತದಲ್ಲಿ ಮೂಲ ಅರ್ಜಿ ಸಂಖ್ಯೆ .463/2014 ರಲ್ಲಿ ಮಾಡಲಾದದಿನಾಂಕ: 02.07.2015 ರ ಆದೇಶದ ವಿರುದ್ಧ ಅರ್ಜಿದಾರರು ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

2. 2 ನೇ ಅರ್ಜಿದಾರರು ಎಂದರೆ, ಅರ್ಜಿದಾರಳ ಪತಿ ಆಕೆಯನ್ನು ಬಿಟ್ಟು ಹೋಗಿದ್ದು, ಬ್ಯಾಂಕಿನಿಂದ ರೂ .18.00 ಲಕ್ಷ ಮತ್ತು ರೂ .2.00 ಲಕ್ಷದ ಸಾಲ ಸೌಲಭ್ಯಗಳನ್ನು ಪಡೆದಿದ್ದು ಹಾಗೂ ಪತಿಯು ಪಡೆದ ಸಾಲಕ್ಕೆ ಅರ್ಜಿದಾರಳು ಖಾತರಿದಾರಳಾಗಿದ್ದಳು ಎಂದು 1 ನೇ ಎದುರುದಾರರರು ಕ್ಲೇಮು ಮಾಡಿದ್ದಾರೆ ಎಂಬುದು ಅರ್ಜಿದಾರಳ ವಾದವಾಗಿದೆ.ಅದರ ಆಧಾರದ ಮೇಲೆ, 1 ನೇ ಎದುರುದಾರ ಬ್ಯಾಂಕು, ಮೂಲ ಅರ್ಜಿಸಂಖ್ಯೆ: 463/2014 ರಲ್ಲಿ, ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಬಾಕಿ ಬರಬೇಕಾದ ಸಾಲಗಳ ವಸೂಲಿ ಅಧಿನಿಯಮ, 1993 ರ ಅಡಿಯಲ್ಲಿ ಬಾಕಿ ಬರಬೇಕಾದ ಮೊತ್ತದ ವಸೂಲಿಗಾಗಿ ಅರ್ಜಿಯನ್ನು ಸಲ್ಲಿಸಿದೆ.

3. ಅಲ್ಲದೆ, 1 ನೇ ಎದುರುದಾರರು ಅರ್ಜಿ ಸಲ್ಲಿಸುವಾಗ ಅರ್ಜಿದಾರರು ಮಾಲೀಕರಾಗಿದ್ದ ಗೋಡೌನಿನ ವಿಳಾಸವನ್ನು ನೀಡಿದ್ದರು.1 ನೇ ಎದುರುದಾರ ಬ್ಯಾಂಕು ಮಾದಾವರದಲ್ಲಿ ಅರ್ಜಿದಾರಳ ಹೆಸರಿನಲ್ಲಿರುವ ಗೋಡೌನಿನ ವಿಳಾಸವನ್ನು ನಮೂದಿಸಿ, ಅರ್ಜಿಯನ್ನು ಸಲ್ಲಿಸಿದ್ದರೆ, ಆಕೆ ಬೆಂಗಳೂರಿನ ನಂದಿನಿ ಲೇಔಟ್ನ ಪರಿಮಳನಗರದಲ್ಲಿ ವಾಸಿಸುತ್ತಿದ್ದರು.ಅರ್ಜಿದಾರಳ ಪತಿಯು ಒಬ್ಬ ಅಲೆಮಾರಿಯಾಗಿದ್ದು, 2005 ರ ವರ್ಷದಿಂದಲೇ ಅರ್ಜಿದಾರರು ಮತ್ತು 2 ನೇ ಎದುರುದಾರರ ನಡುವೆ ವೈವಾಹಿಕ ಬಿಕ್ಕಟ್ಟು ಉಂಟಾಗಿದೆ ಮತ್ತು 2011 ರ ವರ್ಷದಲ್ಲಿ, 2 ನೇ ಎದುರುದಾರನು ಆಕೆಯ ಬಳಿ ಬಂದು, ತಮ್ಮ ಮಗಳಾದ ಕುಮಾರಿ ಶಾಲಿನಿಯ ಹೆಸರಿನಲ್ಲಿ ನಿಶ್ಚಿತ ಠೇವಣಿ ಮಾಡಲು ಅಪೇಕ್ಷಿಸುತ್ತೇನೆಂದು ಹೇಳಿ, ಭರ್ತಿ ಮಾಡಿರದ ಕೆಲವು ದಾಖಲೆಗಳಲ್ಲಿ ಆಕೆಯ ಸಹಿಗಳನ್ನು ಪಡೆದಿದ್ದಾನೆ.ಸಹಿಗಳನ್ನು ಪಡೆಯುವಾಗ, ದಾಖಲೆಗಳ ಉಳಿದ ಭಾಗವನ್ನು ಬ್ಯಾಂಕು ಭರ್ತಿ ಮಾಡುತ್ತದೆಂದು ಮತ್ತು ಕೆನರಾ ಬ್ಯಾಂಕಿನ ಚಿಕ್ಕಬಿದರಕಲ್ಲು ಶಾಖೆಯಲ್ಲಿ ನಿಶ್ಚಿತ ಠೇವಣಿಗೆ ಅರ್ಜಿದಾರಳು ಪೋಷಕಳಾಗಿರುತ್ತಾಳೆಂದು ಹೇಳಿದ್ದನು.ಆ ನಂತರ, 2 ನೇ ಎದುರುದಾರನು ಬ್ಯಾಂಕಿಗೆ ವಂಚನೆ ಮಾಡಲು ಪ್ರಯತ್ನಿಸುತ್ತಿದ್ದನು ಮತ್ತು ಯಂತ್ರೋಪಕರಣಗಳನ್ನು ಸ್ಥಳಾಂತರಿಸಲು ಪ್ರಯತ್ನಿಸುತ್ತಿದ್ದನೆಂದು ಅರ್ಜಿದಾರಳು 1 ನೇ ಎದುರುದಾರ ಬ್ಯಾಂಕ್ ಸಿಬ್ಬಂದಿಗೆ ವಿನಂತಿಸಿದ್ದಳು ಹಾಗೂದಿನಾಂಕ: 09.05.2013 ರಂದು ತನ್ನನ್ನು ಶೂರಿಟಿಯಿಂದ ಕೈಬಿಡುವಂತೆ ಬ್ಯಾಂಕನ್ನು ಕೋರಿದ್ದಾಳೆ.ಆ ನಂತರ ಬ್ಯಾಂಕು ಅರ್ಜಿದಾರಳಿಗೆ ಲೀಗಲ್ ನೋಟೀಸನ್ನು ಸಹ ನೀಡಿದೆ.

4.ದಿನಾಂಕ: 02.07.2015 ರಂದು ಡಿಆರ್ಟಿ ಮುಂದೆ ಈ ವಿಷಯವು ಬಂದಾಗ, 1 ನೇ ಮತ್ತು 2 ನೇ ಪ್ರತಿವಾದಿಗಳನ್ನು (ಇದರಲ್ಲಿ ಅರ್ಜಿದಾರಳು ಮತ್ತು 2 ನೇ ಎದುರುದಾರ) ಏಕಪಕ್ಷೀಯವಾಗಿ ಇರಿಸಲಾಯಿತು ಮತ್ತು ಅದನ್ನು ವಾದಿಯ ಸಾಕ್ಷ್ಯಕ್ಕಾಗಿ ನಿಗದಿಪಡಿಸಲಾಯಿತು.ಅದೇ ದಿನ, ನ್ಯಾಯಾಧಿಕರಣವು, ಸಿವಿಲ್ ಪಕ್ರಿಯಾ ಸಂಹಿತೆಯ 8 ನೇ ಆದೇಶದ 10 ನೇ ನಿಯಮದ ಉಪಬಂಧಗಳನ್ನು ಅನ್ವಯಿಸಿ, ವೆಚ್ಚಗಳೊಂದಿಗೆ ಅರ್ಜಿದಾರರು ಕೋರಿರುವಂತೆ ಮೂಲ ಅರ್ಜಿಯನ್ನು ಪುರಸ್ಕರಿಸಿತು ಮತ್ತು ವಸೂಲಿ ಪ್ರಮಾಣಪತ್ರವನ್ನು ನೀಡುವಂತೆ ಹಾಗೂ ಅಗತ್ಯವಿರುವಂತೆ ಮಾಡಲು ಕಚೇರಿಗೆ ನಿರ್ದೇಶಿಸಿತು.ಹೀಗಾಗಿ, ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

5. ದಾವೆಯ ಪಕ್ಷಕಾರರ ಪರ ಮಾನ್ಯ ವಕೀಲರ ವಾದಗಳನ್ನು ನಾನು ಆಲಿಸಿದ್ದೇನೆ.

6. ಸಾಕ್ಷ್ಯಕ್ಕಾಗಿದಿನಾಂಕ: 02.07.2015 ರಂದು ಡಿಆರ್‌ಟಿ ಮುಂದೆ ಈ ವಿಷಯವು ಬಂದಾಗ, ಡಿಆರ್‌ಟಿಯು 1 ನೇ ಮತ್ತು 2 ನೇ ಪ್ರತಿವಾದಿಗಳನ್ನು (ಅರ್ಜಿದಾರಳು ಮತ್ತು 2 ನೇ ಎದುರುದಾರ), ಏಕಪಕ್ಷೀಯವಾಗಿರಿಸಿ, ವಾದಗಳು ಮತ್ತು ಸಾಕ್ಷ್ಯಗಳನ್ನು ಪರಿಶೀಲಿಸದೆ ಹಾಗೂ ಕಾರಣಗಳನ್ನು ನೀಡದೆ ಮೂಲ ಅರ್ಜಿಯನ್ನು ಪುರಸ್ಕರಿಸಲು ಮುಂದಾಯಿತು ಎಂದು ಅರ್ಜಿದಾರಳ ಪರ ಮಾನ್ಯ ವಕೀಲರಾದ ಶ್ರೀ ಮೊಹಮ್ಮದ್ ಸುಲ್ತಾನ್ ಬಿಯರಿ ಅವರು ತೀವ್ರವಾಗಿ ವಾದಿಸಿದರು. 'ಡಿಆರ್‌ಟಿ'ಯು ಹೊರಡಿಸಿದ ಆದೇಶವು ಸಕಾರಣ ಆದೇಶವಲ್ಲ.ಹಾಗಾಗಿ ಅದನ್ನು ಸಮರ್ಥಿಸಲಾಗದು.ಅಷ್ಟೇ ಅಲ್ಲದೆ, ಪ್ರತಿವಾದಿಗಳು ಲಿಖಿತ ಹೇಳಿಕೆಯನ್ನು ಸಲ್ಲಿಸಿಲ್ಲವೆಂಬ ಮತ್ತು ಅವರನ್ನು ಏಕಪಕ್ಷೀಯವಾಗಿ ಇರಿಸಲಾಗಿದೆಯೆಂಬ ಕಾರಣ ಮಾತ್ರಕ್ಕೆ ನ್ಯಾಯಾಲಯವು, ವಾದಿಯು ಪ್ರಕರಣವನ್ನು ಶ್ರೀಮತಿ ಮಂಜುಳ -ವಿರುದ್ಧ-ಕೆನರಾ ಬ್ಯಾಂಕ್ ಮತ್ತು ಇತರರು ಡಿಕ್ರಿಗಾಗಿ ಸಲ್ಲಿಸಿದ್ದಾರೆಯೇ?ಅಥವಾ ಇಲ್ಲವೇ?ಎಂಬುದನ್ನು ಕಂಡುಕೊಳ್ಳಲು ತನ್ನ ಕಾರ್ಯವನ್ನು ಮತ್ತು ಕರ್ತವ್ಯವನ್ನು ತ್ಯಜಿಸಬೇಕೆಂದು ಅರ್ಥವಲ್ಲ ಎಂದು ಅವರು ವಾದಿಸಿದ್ದಾರೆ.ಅಲ್ಲದೆ, ಪ್ರತಿವಾದಿಯು ತನ್ನ ಪ್ರತಿವಾದವನ್ನು ಲಿಖಿತದಲ್ಲಿ ಸಲ್ಲಿಸಲು ವಿಫಲನಾದ, ಅದೇ ದಿನಾಂಕದಂದು ಡಿಕ್ರಿ ಹೊರಡಿಸಲು ನ್ಯಾಯಾಲಯಕ್ಕೆ ಅಧಿಕಾರ ನೀಡಲಾಗಿದೆ ಎಂದು ಅವರು ವಾದಿಸಿದ್ದಾರೆ.ಆದಾಗ್ಯೂ ವಾದಪತ್ರದಲ್ಲಿನ ದೃಢಕ್ತಿಗಳನ್ನು ಪರಿಶೀಲಿಸುವುದರಿಂದ ನ್ಯಾಯಾಲಯವು ಮುಕ್ತವಾಗಿಲ್ಲ.ಆದುದರಿಂದ, ಅವರು ರಿಟ್ ಅರ್ಜಿಯನ್ನು ಪುರಸ್ಕರಿಸಲು ಕೋರಿದರು.

7. ಇದಕ್ಕೆ ವಿರುದ್ಧವಾಗಿ, 1 ನೇ ಎದುರುದಾರ-ಬ್ಯಾಂಕಿನ ಪರ ಮಾನ್ಯ ವಕೀಲರಾದ ಶ್ರೀ ರುಕ್ಕೋಜಿ ರಾವ್ ಅವರು, ಮೂಲ ಅರ್ಜಿಯನ್ನು ಸಲ್ಲಿಸುವ ದಿನಾಂಕದಂದು ಇದ್ದಂತೆ, ಈಗಿನ ಅರ್ಜಿದಾರಳು ಮತ್ತು 2 ನೇ ಎದುರುದಾರನು ಬ್ಯಾಂಕಿಗೆ ರೂ .25,96,784/-ಮೊತ್ತವನ್ನು ಬಾಕಿ ಉಳಿಸಿಕೊಂಡಿದ್ದಾರೆ ಎಂದು ವಾದಿಸಿದ್ದಾರೆ.ಪ್ರಸ್ತುತ ಅರ್ಜಿದಾರಳನ್ನು ಏಕಪಕ್ಷೀಯವಾಗಿರಿಸಿದ ಕಾರಣ, ' ಡಿಆರ್‌ಟಿ'ಯು ಅರ್ಜಿಯನ್ನು ಪುರಸ್ಕರಿಸಿರುವುದು ಸಮರ್ಥನೀಯವಾಗಿದೆ.ಆದುದರಿಂದ, ಅವರು ರಿಟ್ ಅರ್ಜಿಯನ್ನು ವಜಾಗೊಳಿಸಲು ಕೋರಿದ್ದಾರೆ.

8. ಪಕ್ಷಕಾರರ ಪರ ಮಾನ್ಯ ವಕೀಲರು ಮಂಡಿಸಿದ ವಾದಗಳನ್ನು ನಾನು ಆತಂಕದಿಂದ ಪರಿಗಣಿಸಿದ್ದೇನೆ ಮತ್ತು ದಾಖಲೆಯಲ್ಲಿನ ಸಾಕ್ಷ್ಯಾಧಾರಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ.

9. ಅರ್ಜಿದಾರಳ ಪತಿಯಾದ 2 ನೇ ಎದುರುದಾರನು 1 ನೇ ಎದುರುದಾರ ಬ್ಯಾಂಕಿನಿಂದ ಸಾಲ ಪಡೆದಿದ್ದಾನೆ ಮತ್ತು ಪತಿಯು ಪಡೆದ ಸಾಲಕ್ಕೆ ಅರ್ಜಿದಾರಳು ಖಾತರಿದಾರಳಾಗಿದ್ದಾಳೆ ಎಂಬುದು ನಿರ್ವಿವಾದದ ಸ ಂ ಗತಿಯಾಗಿದೆ.2 ನೇ ಎದುರುದಾರ-ಪತಿಯು ಸಾಲದ ಮೊತ್ತವನ್ನು ಪಾವತಿಸಿಲ್ಲದ ಕಾರಣ, ಬ್ಯಾಂಕು ನೋಟೀಸು ನೀಡಿದೆ ಮತ್ತು ಆ ನಂತರ ಮೂಲ ಅರ್ಜಿಸಂಖ್ಯೆ: 463/2014 ರಲ್ಲಿ ವ್ಯವಹರಣೆಗಳನ್ನು ಪ್ರಾರಂಭಿಸಿದೆ. 'ಡಿಆರ್‌ಟಿ'ಯುದಿನಾಂಕ: 9.4.2014 ರ ಆದೇಶದ ಮೂಲಕ 1 ನೇ ಎದುರುದಾರ-ಬ್ಯಾಂಕಿನ ಪರವಾಗಿ ಮತ್ತು ಅರ್ಜಿಯಲ್ಲಿ ಕೋರಲಾದಂತೆ 2 ನೇ ಎದುರುದಾರನ ವಿರುದ್ಧವಾಗಿ ತಾತ್ಕಾಲಿಕ ಜಪ್ತಿಯ ಏಕಪಕ್ಷೀಯ ಆದೇಶವನ್ನು ನೀಡಿದೆ ಹಾಗೂ ದಾವೆಯ ಸಮನುಗಳನ್ನು ಜಾರಿ ಮಾಡಿದೆ.1 ಮತ್ತು 2 ನೇ ಪ್ರತಿವಾದಿಗಳಿಗೆ ಸಂಬಂಧಿಸಿದಂತೆ (ಈಗಿನ ಅರ್ಜಿದಾರಳು ಮತ್ತು 2 ನೇ ಎದುರುದಾರ) ಕ್ರಮಗಳನ್ನು ಕೈಗೊಳ್ಳಲು ವಿಷಯವನ್ನು ಕಾಲಕಾಲಕ್ಕೆ ಮುಂದೂಡಲಾಗುತ್ತಿತ್ತು.ಅಂತಿಮವಾಗಿ, ವಿಷಯವನ್ನುದಿನಾಂಕ: 02.07.2015 ಕ್ಕೆ ಮುಂದೂಡಿದ್ದಾಗ, ' ಡಿಆರ್‌ಟಿ'ಯು 1 ಮತ್ತು 2 ನೇ ಪ್ರತಿವಾದಿಗಳನ್ನು ಏಕಪಕ್ಷೀಯವಾಗಿರಿಸಿತು ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯ 8 ನೇ ಆದೇಶದ 10 ನೇ ನಿಯಮದ ಉಪಬಂಧಗಳನ್ನು ಅನ್ವಯಿಸಿ ಈ ಕೆಳಗಿನಂತೆ ಪಶ್ಚಿತ ಆದೇಶವನ್ನು ಹೊರಡಿಸಲು ಮುಂದಾಯಿತು:

< 66 (ಸಿಪಿಸಿ ' 8 ನೇ ಆದೇಶದ 10 ನೇ ನಿಯಮವನ್ನು ಅನ್ವಯಿಸಿ, ವೆಚ್ಚಗಳೊಂದಿಗೆ ಅರ್ಜಿದಾರರು ಕೋರಲಾದಂತೆ ಪ್ರಸ್ತುತ ಮೂಲ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಆರ್.ಸಿ., ಯನ್ನು ನೀಡುವಂತೆ ಹಾಗೂ ಅಗತ್ಯವಿರುವ ಸಹಾಯ ಮಾಡುವಂತೆ ಕಚೇರಿಗೆ ನಿರ್ದೇಶಿಸಲಾಗಿದೆ ”

10. ಸಿವಿಲ್ ಪ್ರಕ್ರಿಯಾ ಸಂಹಿತೆಯ 8 ನೇ ಆದೇಶದ 10 ನೇ ನಿಯಮದ ಉಪಬಂಧಗಳನ್ನು ಜಾಗರೂಕತೆಯಿಂದ ಓದಿದಾಗ, ಪ್ರತಿವಾದಿಯು ಲಿಖಿತ ಹೇಳಿಕೆಯನ್ನು ಸಲ್ಲಿಸಿರದಿದ್ದಲ್ಲಿ, ವಾದಪತ್ರದಲ್ಲಿ ಒಳಗೊಂಡಿರುವ ಸಂಗತಿಗಳ ಆಧಾರದ ಮೇಲೆ ತೀರ್ಪನ್ನು ಘೋಷಿಸಲು ನ್ಯಾಯಾಲಯಕ್ಕೆ ನ್ಯಾಯಯುಕ್ತವಾಗಿರ ಬಹುದು

ಎಂಬುದು ಸ್ಪಷ್ಟವಾಗುತ್ತದೆ.ವಾದಿಯು ದಾವೆಯನ್ನು ಡಿಗ್ರಿಗಾಗಿ ಸಲ್ಲಿಸಿದ್ದಾರೆಯೇ?ಅಥವಾ ಇಲ್ಲವೇ?ಎಂಬ ಬಗ್ಗೆ ತಿಳಿಯಲು ನ್ಯಾಯಾಲಯವು ತನ್ನ ಪ್ರಕಾರ್ಯವನ್ನು ಅಥವಾ ಕರ್ತವ್ಯವನ್ನು ತ್ಯಜಿಸಬೇಕೆಂದು ಇದರ ಅರ್ಥವಲ್ಲ.ಪ್ರತಿವಾದಿಯು ತನ್ನ ಪ್ರತಿವಾದವನ್ನು ಲಿಖಿತದಲ್ಲಿ ಸಲ್ಲಿಸಲು ವಿಫಲನಾದ ಅದೇ ದಿನಾಂಕದಂದು ಡಿಕ್ಕಿ ಹೊರಡಿಸಲು ನ್ಯಾಯಾಲಯಕ್ಕೆ ಅಧಿಕಾರ ನೀಡಲಾಗಿದೆ ಎಂಬುದು ಸಹ ವಿವಾದದಲ್ಲಿಲ್ಲ.ಆದಾಗ್ಯೂ, ಮಲ್ಲಯ್ಯ ವಿರುದ್ಧ– ತೋಟಯ್ಯ ' ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ಅಭಿಪ್ರಾಯಪಟ್ಟಿರುವಂತೆ, ವಾದಪತ್ರದಲ್ಲಿ ಮಾಡಲಾದ ದೃಢಕ್ತಿಗಳನ್ನು ಪರಿಶೀಲಿಸುವುದರಿಂದ ನ್ಯಾಯಾಲಯವು ಮುಕ್ತವಾಗಿಲ್ಲ.ಅದರಲ್ಲಿನ 4 ಮತ್ತು 6 ನೇ ಕಂಡಿಕೆಗಳಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ:

4. ಶ್ರೀ ಆದಿಯವರು ಅವಲಂಬಿಸಿದ ಸರ್ವೋಚ್ಚ ನ್ಯಾಯಾಲಯದಲ್ಲಿ ತೀರ್ಮಾನವಾಗಿರುವ ಪ್ರಕರಣಗಳನ್ನು ಪರಿಶೀಲಿಸುವ ಮೊದಲು, ಸಿವಿಲ್ ಪ್ರಕ್ರಿಯಾ ಸಂಹಿತೆಯ VIII ನೇ ಆದೇಶದ 10 ನೇ ನಿಯಮವನ್ನು ಉದ್ಧರಿಸುವುದು ಉಪಯುಕ್ತವಾಗುತ್ತದೆ.ಅದು ಈ ಮು ಂ ದಿನ ಂ ತಿದೆ:

VIII.10. ನ್ಯಾಯಾಲಯವು ಕೇಳಿದ ಪ್ರತಿವಾದ ಪತ್ರವನ್ನು ಹಾಜರು ಪಡಿಸಲು ಪಕಾರನು ತಪ್ಪಿದಲ್ಲಿ ಲಿ ಅನುಸರಿಸಬೇಕಾದ ಪ್ರಕ್ರಿಯೆ:- 1 ನೇ ಅಥವಾ 9 ನೇ ನಿಯಮದ ಮೇರೆಗೆ ಪ್ರತಿವಾದ ಪತ್ರವನ್ನು ಸಲ್ಲಿಸಬೇಕೆಂದು ಯಾವ ಪಕ್ಷಕಾರನನ್ನು ಅಗತ್ಯಪಡಿಸಲಾಗಿದೆಯೋ, ಆ ಯಾರೇ ಪಕ್ಷಕಾರನು ನ್ಯಾಯಾಲಯವು ಸಂದರ್ಭಾನುಸಾರ, ಅನುಮತಿಸಿದ ಅಥವಾ ಗೊತ್ತುಪಡಿಸಿದ ಕಾಲದೊಳಗೆ ಅದನ್ನು ಸಲ್ಲಿಸಲು ತಪ್ಪಿದಲ್ಲಿ ನ್ಯಾಯಾಲಯವು ಅವನ ವಿರುದ್ಧವಾಗಿ ತೀರ್ಪನ್ನು ಉದ್ಘೋಷಿಸತಕ್ಕದ್ದು, ಅಥವಾ ದಾವೆಯ ಸ ಂ ಬ ಂ ಧದಲ್ಲಿ ಸೂಕ್ತವೆಂದು ತಾನು ಭಾವಿಸುವಂಥ ಆದೇಶವನ್ನು ಮಾಡತಕ್ಕದ್ದು ಮತ್ತು ಅಂಥ ತೀರ್ಪನ್ನು ಉದ್ಘೋಷಿಸಿದ ಮೇಲೆ ಡಿಕ್ಕಿಯನ್ನು ಬರೆಯತಕ್ಕದ್ದು. 1976 ರ ತಿದ್ದುಪಡಿಯ ನಂತರ ಬಳಸಲಾದ ಭಾಷೆಯು, ವಿವಾದಗಳ ಇತ್ಯರ್ಥಕ್ಕಾಗಿ ಮಾತ್ರ ಪ್ರತಿವಾದಿಗೆ ಯಾವ ದಾವೆಯಲ್ಲಿ ಸಮನ್ಸ್ ನೀಡಲಾಗಿದೆಯೋ ಅಂಥ ದಾವೆಯಲ್ಲಿ ಮತ್ತು ಪ್ರತಿವಾದಿಯ ಹಾಜರಿಯ ಅಥವಾ ಪ್ರತಿವಾದಿಯ ವಾದದ ಅನುಪಸ್ಥಿತಿಯಲ್ಲಿ ನ್ಯಾಯಾಲಯವು ಹಾಜರಾಗಲು ಸಮನುಗಳಲ್ಲಿ ಸೂಚಿಸಿದ ಅದೇ ದಿನಾ ಂ ಕದ ಂ ದು ತೀರ್ಪು ಹೊರಡಿಸಲು ಮು ಂ ದುವರಿಯಲು ಸಾಧ್ಯವಾಗಲಾರದು ಮತ್ತು ಅದನ್ನು ಮುಕ್ತಾಯಗೊಳಿಸಲಾಗಿದೆ ಮತ್ತು ಪ್ರತಿವಾದಿಯು ನಿರ್ವಹಿಸಬೇಕೆಂದು ಅಗತ್ಯಪಡಿಸಲಾದ ಒಂದು ಕಾರ್ಯವನ್ನು ಎಂದರೆ, ತನ್ನ ಪ್ರತಿವಾದವನ್ನು ಲಿಖಿತದಲ್ಲಿ ನಮೂದಿಸುವುದನ್ನು ನಿರ್ವಹಿಸಲು ವಿಫಲವಾದ ಅದೇ ದಿನಾಂಕದಂದು ಡಿಕ್ಕಿ ಹೊರಡಿಸಲು ಮುಂದುವರಿಯಲು ನ್ಯಾಯಾಲಯಕ್ಕೆ ಅಧಿಕಾರ ನೀಡಲಾಗಿದೆ ಎಂಬ ಹಳೆಯ ಕಾನೂನನ್ನು ಸ್ಪಷ್ಟವಾಗಿ ತೋರಿಸುತ್ತದೆ.ಅದನ್ನು ಮೀರಿ, ನಮ್ಮ ದೃಷ್ಟಿಯಲ್ಲಿ ಅದು ಯಾವುದೇ ಇತರ ಬದಲಾವಣೆಯನ್ನು ಮಾಡುವುದಿಲ್ಲ.

ಈ ಪ್ರಶ್ನೆಯು ಕರ್ನಾಟಕ ರಾಜ್ಯ -ವಿರುದ್ಧ-ಹೇಮ್ರಾಜ್ ಅಚಲ್ಚಂದ್ [ಐಎಲ್ಆರ್ 1985 ಕೆಎಆರ್ 951] ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ಪರಿಗಣನೆಗಾಗಿ ಬಂದಿತ್ತು.ಸದರಿ ಪ್ರಕರಣದಲ್ಲಿ ಪ್ರತಿವಾದಿ ಕರ್ನಾಟಕ ರಾಜ್ಯವು ವಿವಾದಾಂಶಗಳ ಇತ್ಯರ್ಥಕ್ಕಾಗಿ ನಿಗದಿಪಡಿಸಿದ್ದ ದಿನಾಂಕದಂದು ಎಂದರೆ,ದಿನಾಂಕ: 17.1.1974 ರಂದು ಹಾಜರಾಗಲು ವಿಫಲವಾಗಿದೆ.ಆ ಸ್ಥಿತಿಯಲ್ಲಿ ನ್ಯಾಯಾಲಯವು ಆದೇಶಪತ್ರದಲ್ಲಿ ಈ ಮುಂದಿನಂತೆ ಬರೆಯಲು ಮುಂದಾಗಿದೆ.

" ಪ್ರತಿವಾದಿಯು ಗೈರುಹಾಜರಾಗಿದ್ದಾರೆ.ಏಕಪಕ್ಷೀಯವಾಗಿ ಮಂಡಿಸಲಾಗಿದೆ.ಕೋರಲಾದಂತೆ ದಾವೆಯನ್ನು ಡಿಗ್ರಿಗೊಳಿಸಲಾಗಿದೆ.

ಅಪೀಲಿನಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರು ಅ ಂ ದು ನ್ಯಾಯಾಲಯದಲ್ಲಿದ್ದದ್ದರಿಂದ, (ಈಗ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು) ಅವರ ಮುಖಾಂತರ ಮಾತನಾಡಿದ್ದು, ಅವರು ಈ ಮುಂದಿನ ರೀತಿಯಲ್ಲಿ ನ್ಯಾಯಪೀಠದ ಪರವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು:

66 " ತೀರ್ಪು " ಎಂಬ ಪದವು ಸಿವಿಲ್ ಪ್ರಕ್ರಿಯಾ ಸಂಹಿತೆಯ 2 ( 9) ನೇ ಪ್ರಕರಣದಲ್ಲಿನ ಅದರ ಪರಿಭಾಷೆಯಲ್ಲಿರುವಂತೆ, ಅದೇ ಸಂಬಂಧವನ್ನು 8 ನೇ ಆದೇಶದ 5 ( 2) ನೇ ನಿಯಮ ಮತ್ತು 10 ನೇ

ನಿಯಮದಲ್ಲಿ ಹೊಂದಿದೆ.ತೀರ್ಪು ಎ ೦ ದರೆ, ಡಿಕ್ರಿ ಮತ್ತು ಆದೇಶಗಳ ಆಧಾರಗಳ ಮೇಲೆ ನ್ಯಾಯಾಧೀಶರು ನೀಡುವ ಹೇಳಿಕೆ ' ಎಂದರ್ಥ.ಯಾವುದೇ ಸಂಗತಿಯನ್ನು ಅಗತ್ಯಪಡಿಸಲು ನ್ಯಾಯಾಲಯದ ಅಧಿಕಾರವು, ಬೇರೆ ರೀತಿಯಲ್ಲಿ ಸಾಬೀತುಪಡಿಸಲು ನಿರಾಕರಿಸದಿರುವ ಮೂಲಕ ಅ ಒಪ್ಪಿಕೊಳ್ಳಲಾಗಿರುವುದಾಗಿ ಭಾವಿಸಬೇಕು.ಅಂತಹ ಭಾವಿತ ಒಪ್ಪಿಗೆಗಿಂತ ಬೇರೆ ರೀತಿಯಲ್ಲಿ, ಉಪನಿಯಮ ( 3) ರಲ್ಲಿ ಉಲ್ಲೇಖಿಸಿರುವುದೂ ಸೇರಿದಂತೆ, ಆ ಅಂಶಕ್ಕೆ ಸೂಕ್ತವಾದ ಎಲ್ಲಾ ಸನ್ನಿವೇಶಗಳಿಗೆ ವಿವೇಚನೆಯನ್ನು ಬಳಸುವ ಅಗತ್ಯವನ್ನು ತಾನಾಗಿಯೇ ಸೂಚಿಸುತ್ತದೆ ಮತ್ತು ತನ್ನೊಂದಿಗೆ ಕೊಂಡೊಯ್ಯುತ್ತದೆ.ಅಂಥ ವಿವೇಚನೆಯ ಬಳಕೆಯು ವಿಚಾರಣೆಯ ದಾಖಲೆಯಿಂದ ಸ್ಪಷ್ಟವಾಗಬೇಕು.ನಿಜಕ್ಕೂ, ಅದು ವಾದಪತ್ರದಲ್ಲಿ ಒಳಗೊಂಡ ಎಲ್ಲಾ ಸಂಗತಿಗಳನ್ನು ಒಪ್ಪಿಕೊಳ್ಳುವುದಾಗಿ ಪರಿಗಣಿಸಿದಲ್ಲಿ, ಆಗಲೂ ಸಹ ವಾದಿಯು ಅವನು ಕ್ಲೇಮು ಮಾಡುವ ಪರಿಹಾರಕ್ಕೆ ಕಾನೂನಿನಲ್ಲಿ ಅರ್ಹನಾಗಿಲ್ಲದಿರಬಹುದು ಎಂಬುದು ಒಂದು ಸಂಭಾವ್ಯ ಪ್ರಕರಣದಲ್ಲಿ ಸಂಭವಿಸಬಹುದು.ನ್ಯಾಯಾಲಯವು ತನ್ನ ವಿವೇಚನೆಯನ್ನು ಬಳಸಬೇಕು ಮತ್ತು ಅದು ಹಾಗೆ ಮಾಡಿದೆ ಎಂಬುದನ್ನು ಸುಸ್ಪಷ್ಟವಾಗಿ ತೋರಿಸಬೇಕು.

4. ನ್ಯಾಯಾಲಯವು ವಿಸ್ತಾರವಾದ ತೀರ್ಪು ಬರೆಯುವ ಅಗತ್ಯವಿಲ್ಲ.ವಿಷಯಗಳ ಸ್ವರೂಪದಲ್ಲಿಯೇ ಪ್ರತಿವಾದಿಯು ವಾದಪತ್ರವನ್ನು ಸಲ್ಲಿಸದಿದ್ದ ಪ್ರಕರಣಗಳಲ್ಲಿ " ತೀರ್ಪು " ಎಂದು ಕರೆಯಲು ಅರ್ಹವಾಗಲು ಯಾವ ದಸ್ತಾವೇಜನ್ನು ಒಳಗೊಂಡಿರಬೇಕೋ ಅದನ್ನು ನಿಗದಿಪಡಿಸಿ, ಎಲ್ಲಾ ಸಂದರ್ಭಗಳಿಗೂ ಸಿಂಧುವಾಗುವ, ಮತ್ತು ನ್ಯಾಯಾಲಯವು ವಾದಪತ್ರದಲ್ಲಿ ಒಳಗೊಂಡಿರುವ ಸಂಗತಿಗಳ ಆಧಾರದ ಮೇಲೆ ತೀರ್ಪನ್ನು ಪುನರುಚ್ಚರಿಸಲು ಮು ೦ ದಾದಲ್ಲಿ, ಯಾವುದೇ ಕಟ್ಟುನಿಟ್ಟಾದ ನಿಯಮವಿಲ್ಲದಿರಬಹುದು.ಇದು ಅಗತ್ಯವಾಗಿ ಪ್ರತಿಯೊಂದು ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳ ಮೇಲೆ ಅವಲಂಬಿಸಿರಬೇಕು.ಹಾಗಿದ್ದರೂ, ಸಿವಿಲ್ ಪಕ್ರಿಯಾ ಸಂಹಿತೆಯ 2 ( 9) ನೇ ಪ್ರಕರಣದಲ್ಲಿ ಪರಿಭಾಷಿಸಲಾದ ೦ ತೆ, " ತೀರ್ಪಿನ " ಪರಿಕಲ್ಪನೆಯಲ್ಲಿ ಅಂತರ್ಗತವಾದ ಕೆಲವು ಕನಿಷ್ಟ ಅವಶ್ಯಕತೆಗಳಿವೆ.ಇದು ಕನಿಷ್ಟಪಕ್ಷ ದಾವೆಯ ಕ್ಲೇಮಿನ ಸ್ವರೂಪಕ್ಕೆ ಮತ್ತು ವಾದ ಪತ್ರದಲ್ಲಿ ಒಳಗೊಂಡಿರುವ ಸ ೦ ಗತಿಗಳನ್ನು ಒಪ್ಪಿಕೊಳ್ಳಬೇಕೆಂದು ಪರಿಗಣಿಸಿದಲ್ಲಿ ದಾವೆಯ ಕ್ಲೇಮು ಯಶಸ್ವಿಯಾಗಲು ಅರ್ಹವಾಗಿದೆಯೇ?ಎಂಬ ಅಂಶಕ್ಕೆ ನ್ಯಾಯಾಧೀಶರು ತಮ್ಮ ವಿವೇಚನೆಯನ್ನು ಬಳಸಿದ್ದಾರೆ ಎ ೦ ಬಷ್ಟನ್ನಾದರೂ ಇದು ಬಹಿರಂಗಪಡಿಸಬೇಕು.ಈ ಸನ್ನಿವೇಶಗಳಲ್ಲಿ, ನಿರಾಕರಿಸದಿರುವ ಒಪ್ಪಿಗೆಯನ್ನು ಸ್ವತಂತ್ರವಾಗಿ, ಸಂಗತಿಗಳ ರುಜುವಾತುಗಳನ್ನು ತರಿಸಿಕೊಳ್ಳುವ ಅಗತ್ಯವಿದೆಯೆಂದು ನ್ಯಾಯಾಧೀಶರು ಭಾವಿಸುತ್ತಾರೆ ಎಂಬಂಥ ಪ್ರಕರಣಗಳಿಂದ ಇದು ಹೊರತಾಗಿದೆ ". ಮತ್ತು ಅಧಿ ವಿಚಾರಣಾ ನ್ಯಾಯಾಲಯವು ವಿವೇಚನೆಯ ಕೊರತೆಯಿಂದಾಗಿ ಅಪೀಲನ್ನು ಪುರಸ್ಕರಿಸಿದೆ. ಮಾನ್ಯ ನ್ಯಾಯಾಧೀಶರುಗಳು ತಲುಪಿದ ತೀರ್ಮಾನಗಳೊಂದಿಗೆ ನಾವು ಭಿನ್ನಾಭಿಪ್ರಾಯ ಹೊಂದಲು ಸಾಧ್ಯವಿಲ್ಲವಾದರೂ, ' ಸಿಪಿಸಿ'ಯ VIII ನೇ ಆದೇಶದ 10 ನೇ ನಿಯಮದಲ್ಲಿ ಬಳಸಲಾಗಿರುವ ಭಾಷೆಯಲ್ಲಿ ಯಾವುದೂ, ವಾದಪತ್ರದ ಆರೋಪಗಳನ್ನು ಸ್ಪಷ್ಟವಾಗಿ ನಿರಾಕರಿಸುವಾಗ ಅಥವಾ ಪ್ರತಿವಾದಿಯನ್ನು ಏಕಪಕ್ಷೀಯವಾಗಿ ಇರಿಸಿದಾಗ ಅಥವಾ ಸಿಪಿಸಿ ' ಯ VIII ನೇ ಆದೇಶದ 9 ನೇ ನಿಯಮಕ್ಕೆ ಸಂಬಂಧಿಸಿ ನಿಗದಿಪಡಿಸಲಾದ ಸಮಯದೊಳಗೆ ವಾದ ಪತಿವಾದ ಪತ್ರಗಳನ್ನು ಪ್ರತಿವಾದಿಯು ಸಲ್ಲಿಸದಿದ್ದಾಗ, ನಿರಾಕರಿಸದಿರುವ ಒಪ್ಪಿಗೆಯನ್ನು ಸೂಚಿಸಿದ ಹೊರತಾಗಿಯೂ, ವಾದದ ಆರೋಪಗಳ ಪುರಾವೆಯ ಅವಶ್ಯಕತೆಗಳಿಂದ ದೂರ ಮಾಡುತ್ತದೆ ಎಂಬುದರಲ್ಲಿ ನಮಗೆ ಸಂದೇಹವಿಲ್ಲ.

6. ತತ್ಪರಿಣಾಮವಾಗಿ, ಅಪೀಲನ್ನು ಮೇಲೆ ಸೂಚಿಸಿದ ಮಟ್ಟಿಗೆ ಪುರಸ್ಕರಿಸಲಾಗಿದೆ.ವಾದಪತ್ರದ ಆರೋಪಗಳ ಸಮರ್ಥನೆಗಾಗಿ ವಾದಿ ಅಥವಾ ಅವನ ಸಾಕ್ಷಿಗಳನ್ನು ವಿಚಾರಣೆ ಮಾಡಲು ಅಧಿವಿಚಾರಣಾ ನ್ಯಾಯಾಲಯವು ಮುಂದುವರಿಯತಕ್ಕದ್ದು ಎಂಬ ನಿರ್ದೇಶನದೊಂದಿಗೆ ವಿಷಯವನ್ನು ಹಿಂದಕ್ಕೆ ಕಳಿಸಲಾಗಿದೆ ಮತ್ತು ಪ್ರತಿವಾದಿಯು ಆ ಸಾಕ್ಷಿಯನ್ನು ಪಾಟೀ-ಸವಾಲು ಮಾಡಲು ಇಚ್ಛಿಸಿದಲ್ಲಿ, ನಾವು ಅವಲಂಬಿಸಿದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಚ ಹಿನ್ನೆಲೆಯಲ್ಲಿ ಮತ್ತು ಪಾಟೀ-ಸವಾಲಿನ ವ್ಯಾಪ್ತಿಯ ಮೇಲೆ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಕಾಲಪರಿಮಿತಿಗೊಳಪಟ್ಟು, ಹಾಗೆ ಮಾಡಲು ಅವನಿಗೆ ಅನುಮತಿಸತಕ್ಕದ್ದು.

11. ಚರಣ್ ಲಾಲ್ ಸಾಹು -ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮೊಕದ್ದಮೆಯಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು, 10 ನೇ ನಿಯಮದ ಚ ಅಡಿಯಲ್ಲಿ ಕಠಿಣ ಕ್ರಮವನ್ನು ಆಶ್ರಯಿಸಬಾರದು ಎಂದು ಅಭಿಪ್ರಾಯಪಟ್ಟಿದೆ.ಪ್ರತಿವಾದಿಯು ವೆಚ್ಚಗಳ ಕೊಡುವಿಕೆಯಂತಹ ಪದಗಳನ್ನು ಮಂಡಿಸಬಹುದು." ನ್ಯಾಯೋದ್ದೇಶ ' ಎಂಬ ಪದದ ಅರ್ಥವು ಪ್ರತಿವಾದಿಗೆ ಮತ್ತು ಇತರ ಕಡೆಗೆ ಮಾತ್ರವಲ್ಲದೆ, ಸಾಕ್ಷಿಗಳು ಮತ್ತು

ಅನನುಕೂಲವಾಗಿರಬಹುದಾದ ಇತರರಿಗೂ ಸಹ ಅನ್ವಯಿಸುತ್ತದೆ.ನಂತರ, ಎಲ್ಲಾ ವಿವಿಧ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ ಮತ್ತು ಎಚ್ಚರಿಕೆಯಿಂದ ಗಮನಿಸಲಾಗಿದೆ.ನ್ಯಾಯಾಲಯದ ಪ್ರಯತ್ನವು ತಕ್ಷಣದ ನಿರ್ಧಾರಗಳನ್ನು ತಡೆಯುವುದಾಗಿರಬೇಕು ಮತ್ತು ಪಕ್ಷಕಾರರಿಗೆ ತಮ್ಮ ಮೊಕದ್ದಮೆಯನ್ನು ನ್ಯಾಯಯುತವಾಗಿ ಹೋರಾಡುವ ನಿಜವಾದ ಅವಕಾಶವನ್ನು ಒದಗಿಸುವುದಾಗಿರಬೇಕು.

12. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಶಾಂತಿಲಾಲ್ ಗುಲಾಬ್ಚಂದ್ ಮುತಾ -ವಿರುದ್ಧ ಟಾಟಾ ಇಂಜಿನಿಯರಿಂಗ್ ಅಂಡ್ ಲೊಕೊಮೋಟಿವ್ ಕಂಪನಿ ಅಮಿಟೆಡ್ ಮತ್ತು ಇನ್ನೊಬ್ಬರು ಮೊಕದ್ದಮೆಯಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 8 ನೇ ಆದೇಶದ 10 ನೇ ನಿಯಮದ ಉಪಬಂಧಗಳನ್ನು ಪರಿಗಣಿಸುವಾಗ, 8, 9 ಮತ್ತು 13 ನೇ ಕಂಡಿಕೆಗಳಲ್ಲಿ ಈ ಕೆಳಗಿನಂತೆ ತೀರ್ಮಾನಿಸಿದೆ:

ಬೊಗಿದೊಲ ಟೀ ಅಂಡ್ ಟ್ರೇಡಿಂಗ್ ಕಂ. ಲಿ. -ವಿರುದ್ಧ ಹೀರಾಲಾಲ್ ಸೊಮಾನಿ [ (2007) 14 ಎಸ್ಸಿಸಿ 606:ಎಐಆರ್ 2008 ಎಸ್ಸಿ 911] ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಅದೇ ರೀತಿಯ ಅಭಿಪ್ರಾಯವನ್ನು ಪುನರುಚ್ಚರಿಸುವಾಗ ವಾದಪತ್ರದಲ್ಲಿ ಮಾಡಲಾದ ದೃಢಕ್ತಿಗಳನ್ನು ಸಾಬೀತುಪಡಿಸಿದ ಹೊರತು ' ಸಿಪಿಸಿ'ಯ 8 ನೇ ಆದೇಶದ 10 ನೇ ನಿಯಮದ ಅಡಿಯಲ್ಲಿ ಡಿಕ್ರಿಯನ್ನು ಹೊರಡಿಸತಕ್ಕದ್ದಲ್ಲ ಎಂದು ಅಭಿಪ್ರಾಯಪಟ್ಟಿದೆ.ಮೊಕದ್ದಮೆಯ ಸಂಗತಿಗಳು ಮತ್ತು ಸನ್ನಿವೇಶಗಳ ಹಿನ್ನೆಲೆಯಲ್ಲಿ, ನ್ಯಾಯಾಲಯವು ಕಾಲಪರಿಮಿತಿಯ ವಿವಾದಾಂಶವನ್ನು, ಅದು ಹಾಗೆ ಒಳಗೊಂಡಿದ್ದಲ್ಲಿ, ಅದನ್ನು ನಿರ್ಧರಿಸಬೇಕು.(ರಮೇಶ್ ಚಂದ್ ಅರದವಾಟಿಯ-ವಿರುದ್ಧ-ಅನಿಲ್ ಪಂಜ್ವಾನಿ [ (2003) 7 ಎಸ್ಸಿಸಿ 350:ಎಐಆರ್ 2003 ಎಸ್ಸಿ 2508]).

9. ಮೇಲ್ಕಂಡ ವಿಷಯದ ಹಿನ್ನೆಲೆಯಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 8 ನೇ ಆದೇಶದ 10 ನೇ ನಿಯಮದ ಅಡಿಯಲ್ಲಿ ಪರಿಹಾರವು ವಿವೇಚನಾತ್ಮಕವಾಗಿದೆ ಎಂಬುದು ಇತ್ಯರ್ಥವಾದ ಕಾನೂನು ಪ್ರಸ್ತಾವವಾಗಿದೆ ಎಂದು ಕಂಡು ಬರುತ್ತದೆ ಮತ್ತು ಪ್ರತಿವಾದಿಯು ಲಿಖಿತ ಹೇಳಿಕೆಯನ್ನು ಸಲ್ಲಿಸಲು ವಿಫಲನಾದಲ್ಲಿ, ಅಂತಹ ಅಧಿಕಾರವನ್ನು ಚಲಾಯಿಸುವಾಗ ನ್ಯಾಯಾಲಯವು ಹೆಚ್ಚು ಜಾಗರೂಕತೆಯಿ ಂ ದ ಇರಬೇಕಾಗುತ್ತದೆ.ತ ಹ ಅ ಂ ಸಂದರ್ಭಗಳಲ್ಲಿಯೂ ಸಹ, ಪ್ರತಿವಾದಿಯಿಂದ ಭಾವಿಸಲಾದ ಒಪ್ಪಿಗೆ ಇದ್ದರೂ ಸಾಬೀತುಪಡಿಸಬೇಕಾದ ಯಾವುದೇ ಸಂಗತಿಯಿಲ್ಲ ಎಂದು ನ್ಯಾಯಾಲಯವು ಮನವರಿಕೆ ಮಾಡಿಕೊಳ್ಳಬೇಕು ಮತ್ತು ನ್ಯಾಯಾಲಯವು ಅಂಥ ತೀರ್ಪನ್ನು ಹೊರಡಿಸಲು ಕಾರಣಗಳನ್ನು ನೀಡಬೇಕು.ಆದಾಗ್ಯೂ, ಅದು ಸಂಕ್ಷಿಪ್ತವಾಗಿದ್ದರೂ, ತೀರ್ಪನ್ನು ಓದುವ ಮೂಲಕ ಯಾವ ಸಂಗತಿಗಳು ಮತ್ತು ಸನ್ನಿವೇಶಗಳ ಆಧಾರದ ಮೇಲೆ ನ್ಯಾಯಾಲಯವು ಮುಂದುವರೆಯಬೇಕೋ ಅಂತಹ ಸಂಗತಿ ಮತ್ತು ಸನ್ನಿವೇಶಗಳನ್ನು ಯಾವ ತಾರ್ಕಿಕತೆಯ ಅಡಿಯಲ್ಲಿ ದಾವೆಯನ್ನು ಡಿಗ್ರಿಗೊಳಿಸಲಾಗಿದೆ ಎಂಬುದನ್ನು ಪಕ್ಷಕಾರನು ಅರ್ಥಮಾಡಿಕೊಳ್ಳಬೇಕು.

13. ' ಸಿವಿಲ್ ಪ್ರಕ್ರಿಯಾ ಸಂಹಿತೆ'ಯ 8 ನೇ ಕ್ರಮಾದೇಶದ 10 ನೇ ನಿಯಮದ ಅಡಿಯಲ್ಲಿ ಮುಂದುವರಿಯಲು ಈ ನ್ಯಾಯಾಲಯವು ವಿಧಿಸಿದ ಮಾನದಂಡಗಳನ್ನು ಈಡೇರಿಸಲು ಅಧಿ ವಿಚಾರಣಾ ನ್ಯಾಯಾಲಯವು ವಿಫಲವಾದ ಕಾರಣ, ಅಧಿವಿಚಾರಣಾ ನ್ಯಾಯಾಲಯದದಿನಾಂಕ: 12.11.2003 ರ ತೀರ್ಪು ಮತ್ತು ಡಿಕ್ರಿಯನ್ನು ಟೆಲ್ಕೊ ಅಮಿಟೆಡ್ -ವಿರುದ್ಧ-ಡೆಕ್ಕನ್ ಕೋ-ಆಪರೇಟಿವ್ ಅರ್ಬನ್ ಬ್ಯಾಂಕ್ ಅಮಿಟೆಡ್, ದಾವೆಸಂಖ್ಯೆ: 1988 ರ 1924, ಆದೇಶ 9ದಿನಾಂಕ: 12.11.2003 (ಬಾಂ)] ರದ್ದು ಪಡಿಸಲಾಗಿದೆ ಮತ್ತು ದಾವೆಯನ್ನು ಹೊಸದಾಗಿ ತೀರ್ಮಾನಿಸಲು ಅಧಿವಿಚಾರಣಾ ನ್ಯಾಯಾಲಯಕ್ಕೆ ಹಿಂತಿರುಗಿಸಲಾಗಿದೆ.ಅಪೀಲುದಾರನಿಗೆ ಇಂದಿನಿಂದ 3 ವಾರಗಳ ಅವಧಿಯೊಳಗೆ ಲಿಖಿತ ಹೇಳಿಕೆಯನ್ನು ಸಲ್ಲಿಸಲು ಸ್ವಾತಂತ್ರ್ಯವಿದೆ ಮತ್ತು ಆ ನಂತರ ಕಾನೂನು ಪ್ರಕಾರ ಮುಂದುವರಿಯಲು ಅಧಿವಿಚಾರಣಾ ನ್ಯಾಯಾಲಯಕ್ಕೆ ಸ್ವಾತಂತ್ರ್ಯವಿದೆ.ವಿಷಯವು ಬಹಳ ಹಳೆಯದಾದ್ದರಿಂದ, ಅಧಿವಿಚಾರಣೆಯನ್ನು ತ್ವರಿತವಾಗಿ ಮುಕ್ತಾಯಗೊಳಿಸುವಂತೆ, ನಾವು ಅಧಿವಿಚಾರಣಾ ನ್ಯಾಯಾಲಯವನ್ನು ಕೋರುತ್ತೇವೆ.ಮೂಲ ದಾಖಲೆ, ಯಾವುದಾದರೂ ಇದ್ದರೆ, ಅದನ್ನು ಹಿಂದಕ್ಕೆ ಕಳುಹಿಸಬಹುದು.

13. ಪ್ರಸ್ತುತ ವಾದದಲ್ಲಿ ಅಂಗೀಕರಿಸಲಾದಂತೆ, ವಾದಿಯ ವಾದಪತ್ರಗಳು ಮತ್ತು ಸಾಕ್ಷ್ಯ, ಯಾವುವಾದರೂ ಇದ್ದಲ್ಲಿ, ಅವುಗಳನ್ನು ಪರಿಶೀಲಿಸುವುದು ಮತ್ತು ಅಂತಿಮವಾಗಿ ವಾದಪತ್ರಗಳು ಮತ್ತು ಸಾಕ್ಷ್ಯದ ಆಧಾರದ ಮೇಲೆ ವಾದಿಯು ಡಿಕ್ರಿಗಾಗಿ ದಾವೆ ಸಲ್ಲಿಸಿದ್ದಾನೆಯೇ?ಅಥವಾ ಇಲ್ಲವೆ?ಎಂಬುದನ್ನು ಕಂಡುಹಿಡಿಯುವುದು ' ಡಿಆರ್ಟಿ'ಯ ಕರ್ತವ್ಯವಾಗಿದೆ.ಆದರೆ, ' ಡಿಆರ್ಟಿ'ಯು ನೇರವಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 8 ನೇ ಕ್ರಮಾದೇಶದ 10 ನೇ ನಿಯಮವನ್ನು ಅನ್ವಯಿಸಿತು ಮತ್ತು ಯಾವುದೇ ಕಾರಣಗಳನ್ನು ನೀಡದೆ ಅರ್ಜಿಯನ್ನು

ಪುರಸ್ಕರಿಸಿತು.` ಡಿಆರ್‌ಟಿ ' ಹೊರಡಿಸಿದ ಪ್ರಶ್ನಿತ ಆದೇಶವು ಸಕಾರಣ ಆದೇಶವಲ್ಲ. ಪ್ರಕ್ರಿಯಾ ಸಂಹಿತೆಯ 8 ನೇ ಕ್ರಮಾದೇಶದ 10 ನೇ ನಿಯಮದ ಉಪಬಂಧಗಳನ್ನು ಅಧಿನಿಯಮಿಸುವಾಗ ಶಾಸಕಾಂಗದ ಉದ್ದೇಶ ಅದಲ್ಲ.ಆದುದರಿಂದ, ಪ್ರಶ್ನಿತ ಆದೇಶವನ್ನು ಸಮರ್ಥಿಸಲು ಸಾಧ್ಯವಿಲ್ಲ.

14. ಮೇಲೆ ಹೇಳಲಾದ ಕಾರಣಗಳಿಗಾಗಿ, ' ಡಿಆರ್‌ಟಿ ' ಹೊರಡಿಸಿದ ಒ.ಎ.ಸಂಖ್ಯೆ:463/2014 ರಲ್ಲಿ ಮಾಡಲಾದ,ದಿನಾಂಕ: 02.07.2015 ರ ಪ್ರಶ್ನಿತ ಆದೇಶವನ್ನು ಈ ಮೂಲಕ ರದ್ದುಪಡಿಸಲಾಗಿದೆ.ಅರ್ಜಿದಾರರಿಗೆ ವಿಚಾರಣೆಗೆ ಅವಕಾಶ ನೀಡಿದ ನಂತರ, ವಿಷಯವನ್ನು ಹೊಸದಾಗಿ ಮರುಪರಿಶೀಲನೆ ಮಾಡುವುದಕ್ಕಾಗಿ ' ಡಿಆರ್‌ಟಿ'ಗೆ ವಾಪಸ್ಸು ಕಳಿಸಲಾಗಿದೆ ಮತ್ತು ಕಾನೂನಿಗೆ ಅನುಸಾರವಾಗಿ ಮುಂದುವರೆಯುತ್ತದೆ.ಅರ್ಜಿದಾರರಿಗೆ 15 ನೇ ಜುಲೈ, 2019 ರಂದು ಡಿಆರ್‌ಟಿ ಮುಂದೆ ಹಾಜರಾಗುವಂತೆ ನಿರ್ದೇಶಿಸಲಾಗಿದೆ.

ಅದರಂತೆ ಆದೇಶಿಸಲಾಗಿದೆ.